ರಾಜ್ಯದ ಸ್ವಾತಂತ್ರ್ಯ ಹೋರಾಟಗಾರರಿಗೆ ನಿವೃತ್ತಿ ವೇತನ

೪೦೧. ಶ್ರೀ ಡಿ. ಕೆ. ಶಿವಕುಮಾರ್ (ಸಾತನೂರು) ಮತ್ತು ಶ್ರೀ ಎನ್. ತಮ್ಮಣ್ಣ (ಕೆರೆಗೋಡು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಪಿಂಚಣಿಗಾಗಿ ಅರ್ಜಿ ಸಲ್ಲಿಸಿರುವ ಸ್ವಾತಂತ್ರ್ಯ ಹೋರಾಟಗಾರರ ಸಂಖ್ಯೆ ಎಷ್ಟು ಅದರಲ್ಲಿ ರಾಜ್ಯ ಪಿಂಚಣಿ ಪಡೆಯುತ್ತಿರುವವರ ಸಂಖ್ಯೆ ಎಷ್ಟು ಇನ್ನೂ ಎಷ್ಟು ಅರ್ಜಿಗಳು ಮಂಜೂರಾತಿ ನೀಡದೆ ಉಳಿದಿವೆ,

ಆ) ಉಳಿದ ಸ್ವಾತಂತ್ರ್ಯ ಹೋರಾಟಗಾರರಿಗೆ ಸರ್ಕಾರ ಎಷ್ಟು ದಿನಗಳಲ್ಲಿ ಮಂಜೂರಾತಿ ನೀಡಿ ಪಿಂಚಣಿ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುತ್ತದೆ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

ಅ) ಕರ್ನಾಟಕ ರಾಜ್ಯದಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ಪಿಂಚಣಿ ನೀಡುವ ಯೋಜನೆಯನ್ನು ೧೯೭೨ನೇ ಸಾಲಿನಿಂದ ಜಾರಿಗೆ ತಂದ ದಿನದಿಂದ ಇಲ್ಲಿಯವರೆಗೆ ಸುಮಾರು ೫೧,೧೯೬ ಮಂದಿ ಸದರಿ ಪಿಂಚಣಿ ಕೋರಿ ಅರ್ಜಿ ಸಲ್ಲಿಸಿದ್ದಾರೆ. ಅದರಲ್ಲಿ ಸುಮಾರು ೧೯,೫೫೮ ಮಂದಿಗೆ ರಾಜ್ಯ ಗೌರವಧನ ಮಂಜೂರು ಮಾಡಲಾಗಿದ್ದು, ಇನ್ನೂ ಸುಮಾರು ೨,೬೦೦ ರಾಜ್ಯ ಗೌರವಧನ ಮಂಜೂರಾತಿಯ ಅರ್ಜಿಗಳು ಬಾಕಿ ಇವೆ.

ಆ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಡಿ. ಕೆ. ಶಿವಕುಮಾರ್.—ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆಯಲ್ಲಿ ಎಷ್ಟು ಜನ ಸ್ವಾತಂತ್ರ್ಯ ಹೋರಾಟಗಾರರು ಪಿಂಚಣಿ ಕೋರಿ ಅರ್ಜಿಗಳನ್ನು ಸಲ್ಲಿಸಿದ್ದಾರೆ ಎಂದು ಕೇಳಿದ್ದೇನೆ. ಇಲ್ಲಿಯವರೆಗೆ ಸುಮಾರು ೫೧,೧೯೬ ಮಂದಿ ಅರ್ಜಿ ಸಲ್ಲಿಸಿದ್ದಾರೆ, ಅದರಲ್ಲಿ ಸುಮಾರು ೧೯,೫೫೮ ಮಂದಿಗೆ ರಾಜ್ಯ ಗೌರವಧನ ಸಿಗುತ್ತಾ ಇದೆ. ಇನ್ನೂ ೨,೬೦೦ ಅರ್ಜಿಗಳು ಬಾಕಿ ಇವೆ ಎಂದು ತಿಳಿಸಿದ್ದಾರೆ. ಈ ಅರ್ಜಿಗಳನ್ನು ಏತಕ್ಕಾಗಿ ಉಳಿಸಿಕೊಂಡಿದ್ದಾರೆ ಎನ್ನುವುದನ್ನು ದಯವಿಟ್ಟು ತಿಳಿಸಬೇಕು. ಈಗಾಗಲೇ ನಮ್ಮ ಸರ್ಕಾರ ಬಂದನಂತರ ಸಿನಿಮಾ ಸಬ್ಸಿಡಿ ಬಿಲ್ಸ್, ಲೋಕೋಪಯೋಗಿ ಇಲಾಖೆಯ ಬಿಲ್ಸ್ ಏನೇನಿವೆ. ಅದೆಲ್ಲಾ ಮಂಜೂರಾತಿ ಮಾಡಿ ಕ್ಲಿಯರ್ ಆಗಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದಂಥ ಹೋರಾಟಗಾರರ ಬಗ್ಗೆ ಚಿಂತನೆ ಮಾಡದೆ ಈ ವಿಚಾರವನ್ನು ಪರಿಶೀಲನೆ ಮಾಡುತ್ತದೆ ಎಂಬ ಸರ್ಕಾರದ ಉತ್ತರದಿಂದ ನನಗೆ ಬಹಳ ನೋವಾಗುತ್ತದೆ. ಇಡೀ ರಾಷ್ಟ್ರದ ಸ್ವಾತಂತ್ರ್ಯಕ್ಕೋಸ್ಕರ ಯಾರು ಹೋರಾಟ ಮಾಡಿದ್ದಾರೆ, ಅವರೆಲ್ಲರಿಗೂ ಈ ಉತ್ತರದಿಂದ ಅವಮಾನವಾದಂತಾಗುತ್ತದೆ. ಆದದರಿಂದ ಸರ್ಕಾರ ದಯವಿಟ್ಟು ಪರಿಶೀಲನೆ ಮಾಡುತ್ತೇವೆ ಎನ್ನುವುದನ್ನು ಬಿಟ್ಟು ಇಷ್ಟು ದಿನಗಳಲ್ಲಿ ಅವರಿಗೆಲ್ಲಾ ಮಂಜೂರಾತಿ ಮಾಡುತ್ತೇವೆ ಎಂದು ಸದನದ ಮುಖಾಂತರ ಆಶ್ವಾಸನೆ ಕೊಡಬೇಕು ಮತ್ತು ಆದಷ್ಟು ಜಾಗ್ರತೆ ಈ ಕೆಲಸ ಆಗಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಇದು ನಮ್ಮ ರಾಜ್ಯಕ್ಕೆ ಸೀಮಿತವಾದಂಥ ಸ್ವಾತಂತ್ರ್ಯಯೋಧರ ಯೋಜನೆ. ಕೇಂದ್ರ ಬೇರೆ ಗೌರವಧನ ಕೊಡುತ್ತದೆ, ಇದು ರಾಜ್ಯ ಕೊಡತಕ್ಕ ಪಿಂಚಣಿ ೨,೬೦೦ ಅರ್ಜಿಗಳು ಏಕೆ ಬಾಕಿ ಉಳಿದಿದೆ ಅಂದರೆ ಈ ಅರ್ಜಿಗಳಲ್ಲಿ ಸುಮಾರು ೫೦೦ ಅರ್ಜಿಗಳು ೫೧-೧೨-೧೯೮೨ರ ಮೊದಲು ಅಂದರೆ ನಿಗದಿತ ಸಮಯಕ್ಕೆ ಸರಿಯಾಗಿ ಬಂದಂಥ ಅರ್ಜಿಗಳು. ಕೆಲವು ಬೇಕಾದಂಥ ದಾಖಲೆಗಳನ್ನು ಒದಗಿಸಿಲ್ಲ ಎಂಬ ಕಾರಣದಿಂದ ಬಾಕಿಉಳಿದಿದೆ. ಸನ್ಮಾನ್ಯ ಸ್ವಾತಂತ್ರ್ಯ ಯೋಧರು ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಒದಗಿಸಿದರೆ ಅದನ್ನು ಮಂಜೂರು ಮಾಡಲಿಕ್ಕೆ ಸರ್ಕಾರ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ. ಸುಮಾರು ೨೧೦೦ ಅಜಿ ಗಳು ಏನಾಗಿವೆ ಯೆಂದರೆ, ೫೧-೧೨-೧೯೮೨ರ ನಂತರ ನಿಗದಿಯಾದ ಅವಧಿಯ ನಂತರ ಬಂದಂಥ ಅರ್ಜಿಗಳು. ಅವು ತಡವಾಗಿ ಬಂದಿದ್ದರಿಂದ ಅದನ್ನು ಏನು ಮಾಡಬೇಕು ಅಂದರೆ ೫೧-೧೨-೮೨ ರಿಂದ ೫೧-೧೨-೯೫ ರವರೆಗೆ ಇನ್ನೂ ಮೂರು ವರ್ಷಗಳ ಕಾಲ ಅರ್ಜಿಗಳನ್ನು ತೆಗೆದುಕೊಳ್ಳುತ್ತಕ್ಕ ಅವಧಿಯನ್ನು ವಿಸ್ತರಿಸಬೇಕೇ ಎನ್ನುವ ಪ್ರಸ್ತಾವನೆ ನಮ್ಮ ಸರ್ಕಾರದ ಮುಂದೆ ಇದೆ ಅದನ್ನು ಈಗ ಕ್ಯಾಬಿನೆಟ್‌ನಲ್ಲಿ ಮುಂದೆ ತರುತ್ತಾ ಇದ್ದೇವೆ, ಅದು ಆಲ್ಲಿ ತೀರ್ಮಾನವಾದ ಕೂಡಲೇ ಬಹುಶಃ ಈ ಅರ್ಜಿಗಳನ್ನೂ ಕೂಡ ಪರಿಗಣಿಸಲಿಕ್ಕೆ ಸಾಧ್ಯವಾಗುತ್ತದೆ.

ಶ್ರೀ ಡಿ. ಕೆ ಶಿವಕಂಮಾರ್. ಈಗ ಎಷ್ಟು ಅರ್ಜಿಗಳು ಸರಿಯಾಗಿವೆ, ಅಂತಹವುಗಳಿಗಾದರೂ ಸರ್ಕಾರ ಪರಿಚಣೆಯನ್ನು ಮಂಜೂರು ಮಾಡಬಹುದಲ್ಲ. ಅದಕ್ಕೆ ಏನಾದರೂ ಹಣದ ಕೊರತೆ ಇದೆಯೇ ಅಥವಾ ಬೇರೆ ಏನಾದರು ತೊಂದರೆ ಇದೆಯೇ ಎನ್ನುವುದನ್ನು ತಾವು ದಯವಿಟ್ಟು ಹೇಳಬೇಕು. ಎಷ್ಟು ಅರ್ಜಿಗಳು ಕರೆಕ್ಟಾಗಿದೆ ಅಷ್ಟಕ್ಕಾದರೂ ಮಂಜೂರು ಮಾಡಬಹುದಲ್ಲ.

(ಉತ್ತರವಿಲ್ಲ)

ಶ್ರೀ ಬಸವರಾಜ್.—ಈಗ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಈ ಸ್ವಾತಂತ್ರ್ಯ ಹೋರಾಟಗಾರರು ಆ ಕಾಲದಲ್ಲಿ ಹೋರಾಟ ಮಾಡಿದಾಗ ಅವರಿಗೆ ಸ್ವಾರ್ಥ ಇರಲಿಲ್ಲ, ಸ್ವಾರ್ಥ ಇಲ್ಲದೆ ಚಳುವಳಿಯಲ್ಲಿ ಧುಮುಕಿದಂಥ ಜನರು ಅವರು. ಅಂತಹ ಜನರಿಗೆ ಈಗ ಕಾಲಮಿತಿಯನ್ನು ಕೊಟ್ಟು ಆ ಕಾಲಮಿತಿಯೊಳಗೆ ಅರ್ಜಿಯನ್ನು ಕೊಡಲಿಲ್ಲ ಎಂದು ಮತ್ತು ಬೇರೆ ಬೇರೆ ಕಾರಣದಿಂದ ಅರ್ಜಿಗಳನ್ನು ವಿಲೇವಾರಿ ಮಾಡುವುದು ತಡವಾಯಿತು ಎಂದು ಉತ್ತರ ಹೇಳಿದ್ದಾರೆ. ಆದರೆ ಅದು ಯಾವುದೇ ಕಾರಣ ಇರಲಿ, ಅರ್ಜಿ ಕೊಡುವುದು ತಡವಾಗಲಿ ಅಥವಾ ಬೇರೆ ನ್ಯೂನತೆ ಇರಲಿ, ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದಂಥ ಧುರೀಣರಿಗೆ ನಾವು ಏನಾದರೂ ಕೊಡುವುದಿದ್ದರೆ, ಅವರಿಗೆ ಪೆನ್‌ಷನ್ ಮಾತ್ರ ಕೊಡುವುದು ಆದ್ದರಿಂದ ಅದನ್ನು ಆದಷ್ಟು ಬೇಗನೆ ನಮ್ಮ ಸರ್ಕಾರ ಕೊಡಲಿಕ್ಕೆ ಪ್ರಯತ್ನ ಮಾಡಬೇಕು ಎಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ ೩೦-೧೨-೧೯೮೨ರ ಮೇಲೆ ಬಂದಂಥ ಅರ್ಜಿಗಳಲ್ಲಿ ಕೂಡ ಸಂಮಾರು ೫೦೦ ಅರ್ಜಿಗಳಿಗೆ ಡಿಲೇ ಕಂಡೋನ್ ಕೂಡ ಮಾಡಿ ಬೇರೆ ಕಾಲದಲ್ಲಿ ಪರಿಚಣೆ ಕೊಟ್ಟಿದ್ದಾರೆ. ಈಗ ನಮ್ಮ ಸರ್ಕಾರದ ಮುಂದಿರುವ ಪ್ರಸ್ತಾವ ಏನೆಂದರೆ ಇನ್ನೂ ಮೂರು ವರ್ಷ ಅವಧಿ ವಿಸ್ತರಿಸಬೇಕೇ ಅಥವಾ ಇಂಡಿವಿಜುವಲ್ ಕೇಸಸ್ ನೋಡಿಕೊಂಡು ಡಿಲೇ ಕಂಡೋನ್ ಮಾಡಿಕೊಂಡು ಮಂಜೂರು ಮಾಡಬೇಕೇ ಎನ್ನುವ ಪ್ರಸ್ತಾವ ಇವತ್ತಿ ಕ್ಯಾಬಿನೆಟ್ ಮುಂದೆ ಬರುತ್ತಾ ಇದೆ. ಬಹುಶಃ ಅದನ್ನು ಮಂಜೂರು ಮಾಡಿದಮೇಲೆ ಯಾವ ತರಹ ಮಾಡಬಹುದು ಎಂದು ಪರಿಗಣನೆ ಮಾಡುತ್ತೇವೆ. ತಾವು ಹೇಳಿದ್ದು ಒಂದು ಮಾತನ್ನು ಒಪ್ಪುತ್ತೇನೆ. ಏನೆಂದರೆ, ಕಾಲಾವಧಿ ಇರಬಾರದು ಎನ್ನುವುದನ್ನು ನಾನು ಒಪ್ಪುತ್ತೇನೆ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ, ಕಾಲಾವಧಿ ಇಲ್ಲದಿದ್ದರೆ ಏನಾಗುತ್ತದೆ ಎಂದು ಈಗಾಗಲೇ ಕಂಡಿರಬಹುದು. ಮುಂಡ್ಕದ್ದು ಕೆಲವು ಕೇಸ್ ಸಿಪಿಡಿಗೆ ಹೋಗಿರತಕ್ಕಂಥಾದ್ದು ಪಂತ್ತು ಕೆಲವು ಬೋಗಸ್ ಅರ್ಜಿಗಳು ಬಂದಿದ್ದೂ ಇದೆ ಇಲ್ಲ ಎಂದಿಲ್ಲ. ಆದರೆ ನಾವು ಇದನ್ನು ಕಾಲಾತೀತವಾಗಿ ಮಾಡಿಬಿಟ್ಟರೆ ಅನೇಕ ಹೊಸ ಫ್ರೀಡಂ ಫೈಟರ್ಸ್ ಹುಟ್ಟಿಕೊಳ್ಳತಕ್ಕ ಸಂಭವ ಇರುತ್ತದೆ. ಆದುದರಿಂದ ನಿಜವಾದಂಥ ಸ್ವಾತಂತ್ರ್ಯ ಯೋಧರು ಅವರ ಅರ್ಜಿಗಳಿಗೆ ಸರಿಯಾದ ದಾಖಲೆಯನ್ನು ಕೊಟ್ಟರೆ ಮಂಜೂರು ಮಾಡಲಿಕ್ಕೆ ಸರ್ಕಾರ ಹಿಂದುಮುಂದೆ ನೋಡುವುದಿಲ್ಲ.

೧೧-೪೦ ಎ. ಎಂ.

ಆದರೆ ಅದನ್ನು ದುರುಪಯೋಗ ಮಾಡಿಕೊಳ್ಳುವಂಥ ಪರಿಸ್ಥಿತಿ ಉದ್ಭವವಾಗಬಹುದು ಎಂಬ ಕಾರಣದಿಂದ ಈ ನಿರ್ದಿಷ್ಟ ಕಾಲವನ್ನು ಸರ್ಕಾರ ನಿಗದಿಪಡಿಸಿದೆ.

SRI M. V. VENKATAPPA.—I may be permitted to ask a question. I am also receiving political freedom fighters' honorarium.

(INTERRUPTION)

ಶ್ರೀ ಎಂ. ವಿ. ವೆಂಕಟಪ್ಪ.—ಸ್ವಾಮಿ, ಕೇಂದ್ರ ಸರ್ಕಾರದವರು ಈ ಪೊಲಿಟಿಕಲ್ ಪೆನ್‌ಷನ್ ದಾರರಿಗೆ ಕೊಡುತ್ತಿದ್ದ ೭೫೦ ರೂಪಾಯಿ ಮಾಶಾಸನವನ್ನು ೧೦೦೦ಕ್ಕೆ ಏರಿಸಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ೩೦೦ ರೂಪಾಯಿ ಪೆನ್‌ಷನ್ ಕೊಡುತ್ತಿದ್ದಾರೆ. ಅನೇಕ ಜನ ನಮ್ಮ ಹತ್ತಿರ ಬಂದು ಈ ಪೆನ್‌ಷನ್ ಮೊತ್ತವನ್ನು ಜಾಸ್ತಿ ಮಾಡಿಸಬೇಕೆಂದು ಕೇಳುತ್ತಿದ್ದಾರೆ. ಅಧಿಕಾರಿಗಳಿಗೆ ಪ್ರೈಸ್ ಇಂಡೆಕ್ಸ್ ಮೇಲೆ ಆಗಾಗ್ಗೆ ಸಂಬಳ ಇನ್‌ಕ್ರೀಸ್ ಮಾಡುತ್ತಿದ್ದೀರಿ. ಅದೇರೀತಿ ಇವರಿಗೂ ೩೦೦ ರೂ.ಗಳಿಂದ ೫೦೦ ರೂ. ಗಳಿಗೆ ಏರಿಸುವುದಕ್ಕೆ ಸರ್ಕಾರದವರು ಯೋಜನೆ ಮಾಡಿದ್ದಾರೆಯೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಸ್ವಾಮಿ, ಮಾನ್ಯ ಸದಸ್ಯರಿಗೆ ಗೊತ್ತಿರುವ ಪ್ರಕಾರ ೨೦೦ ರೂಪಾಯಿಗಳಿಂದ ೩೦೦ ರೂಪಾಯಿ ಮಾಡಿದ್ದು ಕೂಡ ೧೯೭೯ರಲ್ಲಿ ಅಂದರೆ ಇತ್ತೀಚೆಗೆ ಹೆಚ್ಚು ಮಾಡಿದ್ದೇವೆ. ೩೦೦ ಕ್ಕಿಂತ ಹೆಚ್ಚು ಮಾಡುವಂತ ಪ್ರಸ್ತಾವನೆ ಸರ್ಕಾರದ ಪ್ರಸ್ತಾವನೆಯಲ್ಲಿ ಇಲ್ಲ. ಆದರೂ ಮಾನ್ಯ ಸದಸ್ಯರ ಸಲಹೆಯನ್ನು ವಿಚಾರ ಮಾಡಲಾಗುವುದು.

SRI K. C. MODGEKAR DESAI—Before sanctioning the honorarium whether the Government is publishing in the local newspapers ? Most of the freedom fighters who fought in the second world war are not getting honorarium.

ಶ್ರೀ ವೀರಪ್ಪ ಮೊಯಿಲಿ.—ಇಂಥ ಜಾಹಿರಾತು ಕೊಡತಕ್ಕ ಕಾರ್ಯಕ್ರಮವನ್ನು ನಾವು ಸರ್ಕಾರದಲ್ಲಿ ಇಟ್ಟುಕೊಂಡಿಲ್ಲ.

MR. SPEAKER —If you can identify those who are living, please pass on the list to the Government. They will take action. ಮಾನ್ಯ ಸದಸ್ಯರವರೆ, ನಿಮ್ಮ ಪ್ರಶ್ನೆಯನ್ನು ತಡೆಹಿಯಲಾಗಿದೆ. ಅದೇ ರೀತಿ ಮನೋಹರ ಐನಾಪುರವರೆ ಪ್ರಶ್ನೆಗೂ ಟೈಂ ಬೇಕೆಂದು ಕೇಳಿದ್ದಾರೆ. ನಿಮ್ಮ ಪ್ರಶ್ನೆಯನ್ನು ಮುಂದಿನವಾರ ತೆಗೆದುಕೊಳ್ಳಿ ಣ ಬೈರೇಗೌಡರೇ ನಿಮ್ಮ ಪ್ರಶ್ನೆಗೂ ಕಾಲಾವಕಾಶಬೇಕೆಂದು ಕೇಳಿದ್ದಾರೆ, ಮುಂದಿನ ವಾರ ತೆಗೆದು ಳ್ಳೋಣ.

ಶ್ರೀ ಸಿ. ಬೈರೇಗೌಡ.—ನನಗೆ ಉತ್ತರಗಳು ಬಂದಿದೆ.

ಅಧ್ಯಕ್ಷರು.—ಮಾನ್ಯ ರವಿನ್ಯೂ ಮಂತ್ರಿಗಳು ಜೆಲ್ಲಿಗೆ ಹೋಗಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರ ಪರವಾಗಿ ನಾನು ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಹಾಗಿದ್ದರೆ ಆಗಬಹುದು.

ಕಂದಾಯ ಭೂಮಿಯ ಅತಿಕ್ರಮಣ

೬೦೭. ಆರ್.ಎನ್. ನಾಯ್ಕ್ (ಭಟ್ಕಳ).—ಮಾನ್ಯ ಕಾನೂನು, ಸಂಸದೀಯ, ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕಂದಾಯ ಭೂಮಿ ಅತಿಕ್ರಮಣ ಮಾಡಿ ಮನೆ ಕಟ್ಟಿಕೊಂಡ ಎಷ್ಟು ಪ್ರಕರಣಗಳನ್ನು ಈ ತನಕ ಇಲಾಖೆ ದಾಖಲಿಸಿಕೊಂಡಿದೆ ?

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅಂಥ ಎಷ್ಟು ಪ್ರಕರಣಗಳಿವೆ ?

ಇ) ಭಟ್ಕಳ ತಾಲ್ಲೂಕಿನಲ್ಲಿ ಇರುವ ಪ್ರಕರಣಗಳೆಷ್ಟು ?

ಈ) ಭಟ್ಕಳ ತಹಶೀಲ್ದಾರ್ ಅತಿಕ್ರಮಣ ಮಂಜೂರಿ ಪೂರ್ವದಲ್ಲಿಯೇ ಮಂಜೂರಿ ಭರವಸೆ ನೀಡಿ ಎಷ್ಟು ಪ್ರಕರಣಗಳಲ್ಲಿ ಅತಿಕ್ರಮಣದಾರರಿಂದ ಹಣ ತುಂಬಿಸಿಕೊಂಡಿದ್ದಾರೆ ?

ಶ್ರೀ ಎಂ ವೀರಪ್ಪ ಮೊಯಿಲಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಮಂತ್ರಿಗಳು).—

ಅ) ೧೪೨೨ ಪ್ರಕರಣಗಳು ಉತ್ತರ ಕನ್ನಡ, ದಕ್ಷಿಣ ಕನ್ನಡ ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳಲ್ಲಿರುತ್ತವೆ. ಉಳಿದ ಜಿಲ್ಲೆಗಳ ಮಾಹಿತಿ ಸಧ್ಯ ತಯಾರಿರುವುದಿಲ್ಲ.

ಆ) ೧೨೯೪.

ಇ) ಭಟ್ಕಳ–೨೧೦, ಹೊನ್ನಾವರ–೧೧೪

ಈ) ಮೂರು.

ಶ್ರೀ ಆರ್.ಎನ್ ನಾಯ್ಕ್.—ಅಧ್ಯಕ್ಷರೆ, ೧೪೨೨ ಪ್ರಕರಣಗಳಲ್ಲಿ ಅತಿಕ್ರಮಣ ಮಾಡಿ ಮನೆಗಳನ್ನು ಕಟ್ಟಿದ್ದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇವುಗಳನ್ನು ಎಷ್ಟು ವೇಳೆ ತೆಗೆದುಕೊಂಡು ಮಂಜೂರು ಮಾಡಲಾಗುತ್ತದೆ. ಅತಿಕ್ರಮಣ ಮಾಡಿದವರಿಗೆ ಮನೆ ನಿವೇಶನಕ್ಕಾಗಿ ಎಷ್ಟು ಕ್ಷೇತ್ರವನ್ನು ಅವರಿಗೆ ಮಂಜೂರು ಮಾಡಲಾಗುತ್ತದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಇನ್ನು ನನ್ನ (ಈ) ಪ್ರಶ್ನೆಯಲ್ಲಿ ಭಟ್ಕಳ ತಹಶೀಲ್ದಾರ್ ಅತಿಕ್ರಮಣ ಮಂಜೂರಿ ಪೂರ್ವದಲ್ಲಿಯೇ ಮಂಜೂರಿ ಭರವಸೆ ನೀಡಿ ಎಷ್ಟು ಪ್ರಕರಣಗಳಲ್ಲಿ ಅತಿಕ್ರಮಣದಾರರಿಂದ ಹಣ ತುಂಬಿಸಿಕೊಂಡಿದ್ದಾರೆ ಎಂದು ಕೇಳಿದ್ದಕ್ಕೆ ಮೂರು ಎಂದು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಇದೂ ಇನ್ನೂ ಹೆಚ್ಚಿದೆ. ಇದು ಮೂರೇ ಇದ್ದರೂ ಸಹ ಈ ರೀತಿಯಾಗಿ ಅತಿಕ್ರಮಣದಾರರಿಗೆ ಮಂಜೂರು ಮಾಡುತ್ತೇವೆಂದು